ಮನರಂಜನೆಗೆಂದು ಟೀವಿ ಈ ಕಾಲದ ಅತ್ಯಗತ್ಯ. ಕೊಂಚ ಸುಧಾರಿಸಿಕೊಳ್ಳುವಷ್ಟರಲ್ಲಿ ನರ್ಮದಾ ಗರ್ಭಿಣಿ. ಬಾಣಂತನ ನಿಭಾಯಿಸಿದ್ದು ಹೆಂಡತಿಯ ತೌರಿನವರಾದರೂ ಇವನ ಖರ್ಚು ಇವನಿಗೆ ಇದ್ದೇ ಇತ್ತು. ಗೃಹಸ್ಥಾಶ್ರಮದ ಕಷ್ಟಗಳೆಂದರೇನೆನ್ನುವುದು ಅನುಭವಕ್ಕೆ ದಕ್ಕತೊಡಗಿದ್ದು ಆ ನಂತರವೇ. ಕೈಲಿ ದುಡ್ಡು ಉಳಿಸಿಕೊಳ್ಳುವುದಿರಲಿ, ಬರುವ ಸಂಬಳದಲ್ಲಿ 'ಅಲ್ಲಿಂದಲ್ಲಿಗೆ' ಅನ್ನುವಂತೆ ತೂಗಿಸಿಕೊಂಡು ಹೋಗುತ್ತಿದ್ದುದೇ ಹರಸಾಹಸ. 'ಮಗು ಸ್ವಲ್ಪ ದೊಡ್ಡೋನಾಗ್ಲಿ. ನಾನೂ ಏನಾದ್ರೂ ಕೆಲಸಕ್ಕೆ ಸೇರ್ಕೋತೀನಿ' ಅನ್ನುತ್ತಿದ್ದಳು ಎಸ್ಸೆಸ್ಸೆಲ್ಸಿ ಪಾಸು ಮಾಡಿಕೊಂಡ ನರ್ಮದಾ. ಹೇಗೋ ಪಥ ನಡೆಯುತ್ತಿದ್ದ ಹೊತ್ತಿನಲ್ಲಿ ಅನಿರೀಕ್ಷಿತ ಘೋರ ವಿಪತ್ತು ಬಂದೆರಗಿದೆ. ಅನೇಕ ಉದ್ಯಮಗಳಂತೆ ಹೋಟೆಲ್ ಉದ್ಯಮವೂ ನೆಲ ಕಚ್ಚಿದೆ. 'ಸದ್ಯಕ್ಕೆ ಹೋಟೆಲ್ ತೆರೆಯಲು ಸರ್ಕಾರದ ಪರವಾನಿಗೆ ಇಲ್ಲ' ಎಂದು ಘೋಷಣೆಯಾಗುತ್ತಿದ್ದಂತೆ ಮಾಲೀಕರು ತಲೆಯ ಮೇಲೆ ಕೈ ಹೊತ್ತಿದ್ದರು. ಪರವಾನಿಗೆ ಇದ್ದರೂ ಹೋಟೆಲಿಗೆ ಜನ ಬರುತ್ತಿದ್ದುದು ಸುಳ್ಳು. ವಾರಗಟ್ಟಲೆಯ ಲಾಕ್‌ಡೌನ್. ಅದಿಲ್ಲದಿದ್ದಾಗಲೂ ಹೊರಗಿನಿಂದ ಯಾವ ವಸ್ತು ಖರೀದಿಸುವುದಕ್ಕೂ, ಏನು ತಿನ್ನುವುದಕ್ಕೂ ಹೆದರಿ ಹೋಗಿದ್ದಾರೆ ಜನ. ಜೀವಭಯ. 'ಕೊರೊನಾ' ವೈರಾಣು ಯಾವುದರಲ್ಲಿ ಅಡಗಿ ಕೂತಿದ್ದು ಯಾವ ಮಾಯದಲ್ಲಿ ದೇಹ ಹೊಕ್ಕುಬಿಡುವುದೋ ಎನ್ನುವ ಭೀತಿ. ಮೂರನೆಯ ಸಲ ಲಾಕ್‌ಡೌನ್ ಜಾರಿಯಾಗುತ್ತಿದ್ದಂತೆ ಯಜಮಾನರು ಕೈಚೆಲ್ಲಿದರು. ಎಲ್ಲರ ಕೈಗೆ ಒಂದಿಷ್ಟು ದುಡ್ಡು. ಅನಿವಾರ್ಯ ವಿದಾಯ. "ಇಂತಾ ಪರಿಸ್ಥಿತೀಲಿ ಹೋಟೆಲ್ ಮುಚ್ಚಿಬಿಡೋದೇ ವಾಸಿ ಅಂದ್ಕೊಂಡಿದೀನಿ" ಅನ್ನುವಾಗ ಯಜಮಾನರ ಕಂಠ ಗದ್ಗದ. ಅವರನ್ನು ನೆಚ್ಚಿಕೊಂಡು ಹೊಟ್ಟೆಪಾಡು ರೂಪಿಸಿಕೊಂಡವರ ಕಂಗಳಲ್ಲಿ ನೀರು.

ಮುಂದೋಡುತ್ತಿತ್ತು ವ್ಯಾನು. ಮನೆಯ ಸಕಲೆಂಟು ಸಾಮಗ್ರಿಗಳನ್ನು ಜೊತೆಗೆ ಕೊಂಡೊಯ್ಯಲು ಸ್ವಂತ ವಾಹನವಿದ್ದರೆ ಸೂಕ್ತ ಅನ್ನುವುದರ ಜೊತೆ ರೈಲಿನಲ್ಲೋ, ಬಸ್ಸಿನಲ್ಲೋ ಜನಜಂಗುಳಿಯ ಜೊತೆ ಪ್ರಯಾಣಿಸಲು ಹೆದರಿಕೆ. ಹಾಗಾಗಿ ತನ್ನ ಮಟ್ಟಕ್ಕೆ ಹೆಚ್ಚು ಅನಿಸಿದರೂ ಬಾಡಿಗೆ ವಾಹನ ಮಾಡಿಕೊಂಡು ಹೊರಟಿದ್ದ ರಾಜೀವ. ತಮ್ಮಂತೆ ಬೆಂಗಳೂರು ಬಿಟ್ಟು ಊರಿಗೆ ಹೊರಟವರ ವಾಹನಗಳು ದಾರಿಯುದ್ದಕ್ಕೂ ಸಾಲುಗಟ್ಟಿದ್ದುವು. ಕೆಲವು ಕಡೆಗಳಲ್ಲಂತೂ ನೂಕುನುಗ್ಗಲು ಹೆಚ್ಚಾಗಿ ಆಮೆವೇಗ. ಟೋಲ್‌ಗಳಿದ್ದಲ್ಲಿ ವಿವಿಧ ಚಾನಲ್‌ನವರು ಮುಖದ ಎದುರು ಮೈಕ್ ಹಿಡಿದು ಕೇಳುತ್ತಿದ್ದ ಪ್ರಶ್ನೆಗಳು.

"ಯಾವ ಊರು? ಯಾಕೆ ಬೆಂಗಳೂರು ಬಿಡ್ತಿದೀರಿ? ಮತ್ತೆ ವಾಪಸು ಬರ್ತೀರಾ?"

ಸುದ್ದಿ ಸಂಗ್ರಹಿಸುವ ಹುಮ್ಮಸ್ಸು ಅವರಿಗೆ. ಒಳಗೊಳಗೆ ಕುಸಿದು ಹೋಗುತ್ತಿರುವ ಅನುಭವ ಇವರಿಗೆ. ಸುಸೂತ್ರವಾಗಿ ಹಾದಿ ಸಾಗಿದರೆ ಮೂರು, ಮೂರೂವರೆ ಗಂಟೆಗಳ ದಾರಿ. ಬೆಳಗಿನ ಒಂಬತ್ತಕ್ಕೆ ಮನೆ ಬಿಟ್ಟವರು ಮಧ್ಯಾಹ್ನ ಊಟದ ಹೊತ್ತಿಗೆ ಮನೆ ಸೇರಿಕೊಳ್ಳುತ್ತೇವೆ ಎಂದು ರಾಜೀವನ ಲೆಕ್ಕಾಚಾರ. ಪರಿಸ್ಥಿತಿ ಸುಧಾರಿಸುವವರೆಗೆ ಹಳ್ಳಿಯಲ್ಲಿ ಕಾಲ ಹಾಕಿ, ಮುಂದಿನ ಯೋಚನೆ ಮುಂದೆ. ದಣಿದ ಮನಸ್ಸಿನ ರಾಜೀವ ಸೀಟಿನ ಹಿಂಬದಿಗೆ ತಲೆಯೊರಗಿಸಿ ಕಣ್ಣು ಮುಚ್ಚಿಕೊಂಡ.

★★★

ಅಂದುಕೊಂಡಿದ್ದೊಂದು, ಆಗಿದ್ದೊಂದು. ತೆರೆದ ಬಾಹುಗಳ ಸ್ವಾಗತ ಸಿಗುತ್ತದೆಯೋ ಇಲ್ಲವೋ, ಆದರೆ ಅಣ್ಣ ನಿರ್ಲಕ್ಷ್ಯ ತೋರಿಸಲು ಬರುವುದಿಲ್ಲ ಅಂದುಕೊಂಡಿದ್ದ ರಾಜೀವ. ಆ ಮನೆಯಲ್ಲಿ, ಪೂರ್ವಜರಿಂದ ಬಂದಿರುವ ಒಂದೂವರೆ ಎಕರೆ ಅಡಿಕೆತೋಟದಲ್ಲಿ, ಒಂದೆಕರೆ ಗದ್ದೆಯಲ್ಲಿ ಅವನಿಗೂ ಹಕ್ಕಿದೆ. ತನ್ನ ಕಾಲಮೇಲೆ ತಾನು ನಿಲ್ಲುವ ಉಮೇದಿನಲ್ಲಿ ಹದಿಹರೆಯದ ಹುಡುಗ ಊರು ಬಿಡುವ ಮಾತಾಡಿದಾಗ ಅಣ್ಣ ಅರೆಮನಸ್ಸಿನಿಂದಲೇ ಕಳಿಸಿಕೊಟ್ಟಿದ್ದ. ಅದರಲ್ಲೂ ಹೊರಟಿದ್ದು ಹೋಟೆಲ್